**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

ಸಿ.ಸಿ.ಸಂಖ್ಯೆ **:2366/2025**

| | | |
|---|---|---|
| ಪಿರ್ಯಾದಿ | : | ರಾಜ್ಯ, ಪರವಾಗಿ ಬಣಕಲ್ ಪೊಲೀಸ್ ಠಾಣೆ,<br>ಮೂಡಿಗೆರೆ ತಾಲ್ಲೂಕು. |
| | | ವಿರುದ್ಧ |
| ಆರೋಪಿತರು | :**1.** | ಜಾಸ್ವಿನ್ ಲೋಬೋ, ವಯಸ್ಸು ಸುಮಾರು 23 ವರ್ಷ,<br>ಬಿನ್ ಜಾಕೋಬ್ ಲೋಬೋ, ವಾಸ: ಕೊಲ್ಲತಕೆರೆ ಹೌಸ್,<br>ಬಡಗಕಜೆಕಾರು, ಬಂಟ್ವಾಳ ತಾಲ್ಲೂಕು,<br>ದಕ್ಷಿಣ ಕನ್ನಡ ಜಿಲ್ಲೆ. |
| | **2.** | ಪ್ರವೀಣ್ ಪೌಲ್ ಡಿಸೋಜಾ, ವಯಸ್ಸು ಸುಮಾರು 42 ವರ್ಷ,<br>ಬಿನ್ ಮಾರ್ಕ್ ಲಿಯೋ ಡಿಸೋಜಾ,<br>ವಾಸ: ದಾಸರಹಳ್ಳಿ, ಬಣಕಲ್,<br>ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

ದೋಷಾರೋಪಣೆ

ಶ್ರೀಮತಿ ಸುರಕ್ಷ.ಕೆ.ಕೆ., 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:-

ದಿನಾಂಕ 13.08.2025 ರಂದು ಬೆಳಗ್ಗೆ 9.00 ರ ಸಮಯದಲ್ಲಿ ಬಣಕಲ್ ಪೊಲೀಸ್ ಠಾಣಾ ವ್ಯಾಪ್ತಿಯ ಬಣಕಲ್ ನಿಂದ ಮತ್ತಿಕಟ್ಟೆ ಕಡೆಗೆ ಹೋಗುವ ಟಾರು ರಸ್ತೆಯಲ್ಲಿ ಚಾಸಾ-1 ರವರು ಅವರ ಬಾಬ್ತು ವಾಹನ ನೋಂದಣಿ ಸಂಖ್ಯೆ: ಕೆಎ-18-ಇಜಿ-6709 ನೇ ಹೊಂಡಾ ಡಿಯೋ ಗ್ರೇ ಮೋಟಾರ್ ಸೈಕಲ್ ನಲ್ಲಿ ಮತ್ತಿಕಟ್ಟೆಯಿಂದ ಬಣಕಲ್ ಕಡೆಗೆ ಬರುತ್ತಿರುವಾಗ 1 ನೇ ಆರೋಪಿಯಾದ ನೀವು ವಾಹನ ನೋಂದಣಿ ಸಂಖ್ಯೆ: ಕೆಎ-18-ಸಿ-1351 ನೇ ಮಹಿಂದ್ರ ಬೊಲೆರೋ ಮ್ಯಾಕ್ಸಿ ಟ್ರಕ್ ಪ್ಲಸ್ ಗೂಡ್ಸ್ ವಾಹನವನ್ನು ದುಡುಕು, ನಿರ್ಲಕ್ಷ್ಯತನ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದಿರುತ್ತೀರಿ. ಈ ರೀತ್ಯಾ 1 ನೇ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **281** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿಯಾದ ನೀವು ಸದರಿ ವಾಹನವನ್ನು ನಿರ್ಲಕ್ಷ್ಯತನ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಚಾಸಾ-1 ರವರ ಬೈಕ್ ಗೆ ಡಿಕ್ಕಿಪಡಿಸಿದ ಪರಿಣಾಮ ಚಾಸಾ-1 ರವರಿಗೆ ಬಲದೇ ಕಾಲಿನ ಮಂಡಿಗೆ, ಪಾದಕ್ಕೆ, ಬೆನ್ನಿಗೆ ಪೆಟ್ಟಾಗಿ ಸಾಮಾನ್ಯ

ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ 1 ನೇ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **125(ಎ)**ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿಯಾದ ನೀವು ಚಾಲನ ಪರವಾನಗಿ ಇಲ್ಲದೇ ಇದ್ದರೂ ಸಹ ಸದರಿ ವಾಹವನ್ನು ಚಾಲನೆ ಮಾಡಿಕೊಂಡು ಬಂದಿರುತ್ತೀರಿ. ಈ ರೀತ್ಯಾ 1 ನೇ ಆರೋಪಿಯಾದ ನೀವು ವಾಹನ ಕಾಯಿದೆ ಕಲಂ **181** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು 1 ನೇ ಆರೋಪಿಗೆ ಚಾಲನಾ ಪರವಾನಗಿ ಇಲ್ಲದೇ ಇದ್ದರೂ ಸಹ ನಿಮ್ಮ ವಾಹನವನ್ನು 1 ನೇ ಆರೋಪಿಗೆ ಚಲಾಯಿಸಲು ನೀಡಿರುತ್ತೀರಿ. ಈ ರೀತ್ಯಾ 2 ನೇ ಆರೋಪಿಯಾದ ನೀವು ವಾಹನ ಕಾಯ್ದೆ ಕಲಂ **180** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರ: 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

1 ನೇ ಆರೋಪಿಯ ಉತ್ತರ:
2 ನೇ ಆರೋಪಿಯ ಉತ್ತರ:

ಪ್ರ: 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿಯ ಉತ್ತರ:
2 ನೇ ಆರೋಪಿಯ ಉತ್ತರ:

(ಆರೋಪಿತರಿಗೆ ದಿನಾಂಕ 17.06.2026 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.

ಮೂಡಿಗೆರೆ
ದಿನಾಂಕ: 17.06.2026.